ಗಜನಿ ಭೂಮಿ ಪಡೆದಿದ್ದು, ಈ ಬಗ್ಗೆ ಪರಿಹಾರವನ್ನು ಪಡೆಯಲು ಕೇವಲ ಕೆಲವು ಶ್ರೀಮಂತ ರೈತರು ಶ್ರೇಷ್ಠ ನ್ಯಾಯಾಲಯಕ್ಕೆ ಹೋಗಿ ಆದೇಶ ಪಡೆದವರಿಗೆ ಮಾತ್ರ ವಿತರಿಸಿರುವುದು ನಿಜವೇ;

ಆ) ಬಡವರೂ ಅನಕ್ಷರಸ್ಥರೂ ಆದ ಅನೇಕ ರೈತರಿಗೆ ಈವರೆಗೂ ಪರಿಹಾರ ನೀಡಿಲ್ಲವಾದ್ದರಿಂದ ಸಂಕಷ್ಟದಲ್ಲಿರುವ ಈ ರೈತರಿಗೆ ಪರಿಹಾರ ನೀಡಲು ಸರ್ಕಾರ ಏನು ಕ್ರಮಕೈಗೊಂಡಿದೆ. ಸಂಕಷ್ಟದಲ್ಲಿರುವ ರೈತರಿಗೆ ಯಾವಾಗ ಪರಿಹಾರ ನೀಡಲಾಗುವುದು?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಮಾದನಗೆರೆ ಇತರೆ 8 ಗ್ರಾಮಗಳಲ್ಲಿ ಒಟ್ಟು 1849–06 ಎಕರೆ ಜಮೀನನ್ನು ಭೂಸ್ವಾಧೀನಪಡಿಸಲಾಗಿದೆ. ಒಟ್ಟು 7 ಪ್ರಕರಣಗಳು ಭೂಸ್ವಾಧೀನ ಕಾಯ್ದೆ ಅಧಿನಿಯಮ 18ರಡಿ 1978ರಲ್ಲಿ ದಾಖಲಾಗಿದೆ. ಬಾಗಶ: ಭೂ ಮಾಲೀಕರು ಮಾತ್ರ ಅಧಿನಿಯಮ 18ರಡಿ ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದು ತಿಳಿದು ಬಂದಿವೆ. ನ್ಯಾಯಾಲಯದ ತೀರ್ಮಾನದಂತೆ ಹೆಚ್ಚುವರಿ ಮೊಬಲಗು ಠೇವಣಿ ಮಾಡಲಾಗಿದೆ. ಆದ್ದರಿಂದ ಕೇವಲ ಶ್ರೀಮಂತ ರೈತರಿಗೆ ಮಾತ್ರ ಭೂಪರಿಹಾರ ವಿತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಭೂಸ್ವಾಧೀನ ಕಾಯ್ದೆಯಂತೆ ಐತೀರ್ಪು ರಚಿಸಿ ಪರಿಹಾರ ಪಾವತಿಸಿದೆ. ಹೆಚ್ಚುವರಿ ಪರಿಹಾರ ಕುರಿತು ನ್ಯಾಯಾಲಯದ ತೀರ್ಪಿನಂತೆ ರೂ. 5.85,99,621–ಗಳನ್ನು ನ್ಯಾಯಾಲಯದಲ್ಲಿ ಠೇವಣಿ ಮಾಡಲಾಗಿದೆ. ರೈತರು ನ್ಯಾಯಾಲಯದಲ್ಲಿ ಹಕ್ಕು ದಾಖಲೆಗಳನ್ನು ಹಾಜರುಪಡಿಸಿ ಪರಿಹಾರ ಪಡೆಯುತ್ತಲಿದ್ದಾರೆ. ಈಗಾಗಲೇ ಐತೀರ್ಪು ರಚಿಸಿ ಭೂಸ್ವಾಧೀನ ಕಾಯದೆ ಅಧಿನಿಯಮ 18ರನ್ವಯ ಅರ್ಜಿ ಸಲ್ಲಿಸಿರುವ ಅರ್ಜಿ ಮೇರೆಗೆ ಪ್ರಕರಣಗಳು ನ್ಯಾಯಾಲದಲ್ಲಿ ಇರುವ ಪ್ರಯುಕ್ತ ನೇರವಾಗಿ ಪರಿಹಾರ ಪಾವತಿಸುವ ಪ್ರಮೇಯ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ನೇಕಾರರ ಆತ್ಮಹತ್ಯೆ

255 (579): ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ನೇಕಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಎಷ್ಟು ಜನ ನೇಕಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ; ರಾಜ್ಯದ ಯಾವ ಯಾವ ಕಡೆಗಳಲ್ಲಿ ಆತ್ಮಹತ್ಯೆ ಸಂಭವಿಸಿವೆ;

ಇ) ನೇಕಾರರು ಆತ್ಮಹತ್ಯೆಯಂತಹ ಕೆಲಸಗಳಿಗೆ ಕೈಹಾಕಿರುವುದಕ್ಕೆ ಕಾರಣಗಳೇನು;

ಈ) ನೂಲು ಪೂರೈಕೆ ಆಗದಿರುವುದು, ಸರಿಯಾದ ರೀತಿಯಲ್ಲಿ ವೇತನ ನೀಡದಿರುವುದು ಎಷ್ಟು ದಿನಗಳಿಂದ ನಡೆದಿವೆ;

ಉ) ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು) :

ಅ) ಹೌದು.

ಅ) ಒಬ್ಬ ನೇಕಾರನು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಮಣಿಹಾಳ ಗ್ರಾಮದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ವರದಿ ಮಾಡಿದೆ.

ಆ) ಕೌಟುಂಬಿಕ ಕಾರಣಗಳಿಂದ ಎಂಬುದಾಗಿ ವರದಿಯಾಗಿದೆ.

ಇ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ಇತ್ತೀಚಿನ ದಿನಗಳಲ್ಲಿ ಹಣಕಾಸಿನ ಮುಗ್ಗಟ್ಟು ಉಂಟಾಗಿ ನೇಕಾರರಿಗೆ ಸುಮಾರು ಎರಡು ತಿಂಗಳಿನಿಂದ ನೂಲು ಪೂರೈಕೆಯಲ್ಲಿ ಸ್ವಲ್ಪ ಅಡಚಣೆಯಾಗಿರುತ್ತದೆ.

ಈ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಆರ್ಥಿಕ ಪುನರ್‌ರಚನೆ ಮತ್ತು ಪುನರ್‌ವಸತಿಗೆ ದೀನದಯಾಳ್ ಹತ್‌ಕರ್ಘಾ ಪ್ರೋತ್ಸಾಹನದಡಿ ಆರ್ಥಿಕ ನೆರವು ಪಡೆಯಲು ಕ್ರಮಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿರುವ ಪಶು ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳು

256 (294): ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪಶು ಆಸ್ಪತ್ರೆ, ಪಶು ಚಿಕಿತ್ಸಾಲಯ, ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಹಾಗೂ ಕೃತಕ ಗರ್ಭಧಾರಣಾ ಉಪ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರು ಹಾಗೂ ಇತರೆ ಹುದ್ದೆಗಳ ವಿವರ ನೀಡುವುದು;

ಆ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು;

ಇ) ಕಟ್ಟಡಗಳು ಇಲ್ಲದ್ದಕ್ಕೆ ಕಟ್ಟಡಗಳನ್ನು ಕಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಮುಂಡರಗಿ ಮತ ಕ್ಷೇತ್ರದಲ್ಲಿ ಸದರಿ ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು; ಈ ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಎಂ. ಮಹಾದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ರಾಜ್ಯದಲ್ಲಿರುವ ಪಶು ಆಸ್ಪತ್ರೆ, ಪಶುಚಿಕಿತ್ಸಾಲಯ, ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಹಾಗೂ ಗರ್ಭಧಾರಣಾ ಉಪ ಕೇಂದ್ರಗಳಿಗೆ ವಿವಿಧ ವೃಂದಗಳಲ್ಲಿ ಮಂಜೂರಾಗಿರುವ ಹುದ್ದೆಗಳು ಈ ಕೆಳಕಂಡಂತಿವೆ.

ಕ್ರ.ಸಂ.	ಹುದ್ದೆಯ ವಿವರ	ಮಂಜೂರು	ಭರ್ತಿ	ಖಾಲಿ
1.	ಸಹಾಯಕ ನಿರ್ದೇಶಕರು	294	260	34
2.	ಪಶುವೈದ್ಯಾಧಿಕಾರಿ	1775	949	826*
3.	ಪಶುವೈದ್ಯಕೀಯ ಮೇಲ್ವಿಚಾರಕರು	226	77	149
4.	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	2084	1753	331
5.	ಪಶುವೈದ್ಯಕೀಯ ಪರೀಕ್ಷಕರು	1487	1279	208
6.	ಪಶುವೈದ್ಯಕೀಯ ಸಹಾಯಕರು	2398	1447	951*
7.	ಡಿ ದರ್ಜೆ ನೌಕರರು	5657	4422	1235

ಆ) ಪಶುವೈದ್ಯಾಧಿಕಾರಿಗಳ 203 ಹುದ್ದೆಗಳನ್ನು ಹಾಗೂ ಪಶುವೈದಕೀಯ್ಯ ಸಹಾಯಕರ 311 ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲಾಗಿದೆ, ಇತ್ತೀಚೆಗೆ ಪಶುವೈದ್ಯಾಧಿಕಾರಿಗಳ